2017 ಕ.ತೀ.ವ 1286

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೆ ಗೌಡ

ಶ್ರೀಮತಿ ವಿ.ಎಸ್. ಕೃತಿಕ –ವಿರುದ್ಧ– ನಿರ್ದೇಶಕರು,
ಲೋಕಶಿಕ್ಷಣದ ನಿರ್ದೇಶನಾಲಯ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನದ 226 ಹಾಗೂ 227 ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಅರ್ಜಿದಾರಳು, ಬೆರಳಚ್ಚುಗಾರ್ತಿಯಾಗಿ ಪ್ರತ್ಯರ್ಜಿದಾರರ ಬಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದು *ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಮತ್ತು ಇತರರು –ವಿರುದ್ಧ– ಉಮಾದೇವಿ ಮತ್ತು ಇತರರು – 2006(4) ಎಸ್‌ಸಿಸಿ ಪುಟ 1,* ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಅರ್ಜಿದಾರರ ಹುದ್ದೆಯನ್ನು ಖಾಯಂಗೊಳಿಸಲು ಪರಿಗಣಿಸುವಂತೆ ಅಗತ್ಯಪಡಿಸಿದ್ದಾರೆ.

ಪ್ರತ್ಯರ್ಜಿದಾರರು ವಸ್ತುವಿಷಯವನ್ನು ಮತ್ತೆ ಪರಿಗಣಿಸಿ ಅರ್ಜಿದಾರರ ಸೇವೆಯನ್ನು ಖಾಯಂ ಮಾಡಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಅರ್ಜಿದಾರರ ಪ್ರಕಾರ, ದಿನಗೂಲಿಗಳಂತೆ ಕೆಲಸ ಮಾಡುತ್ತಿರುವ ನೌಕರರ ಸೇವೆಗಳನ್ನು ಖಾಯಂ ಮಾಡಿರುವ ದಿನಾಂಕ 16.09.2014ರ ಆದೇಶವನ್ನು ನೋಡಿ. ಅದೇ ರೀತಿಯಲ್ಲಿ ನನ್ನ ಉದ್ಯೋಗವನ್ನು ಖಾಯಂಗೊಳಿಸಿ ಎಂದು ಅರ್ಜಿದಾರರು ನಿವೇದಿಸಿರುವರು.

ಅರ್ಜಿ ಸಂ. 2651/2012 ರಲ್ಲಿ ದಿನಾಂಕ 6ನೇ ನವೆಂಬರ್, 2012 ಆದೇಶದ ಮೂಲಕ ಈಗಾಗಲೇ ಒಂದು ಸುತ್ತಿನ ದಾವೆಯಲ್ಲಿ, ಈ ನ್ಯಾಯಾಲಯವು ರಿಟ್ ಅರ್ಜಿಯ ಮೇಲೆ ಹೊರಡಿಸಿದ ಮಧ್ಯಂತರ ಆದೇಶಕ್ಕೆ ಅನುಸಾರವಾಗಿ ಅರ್ಜಿದಾರರು ಸೇವೆಯಲ್ಲಿ ಮುಂದುವರೆಸುವ ಸಂಬಂಧದಲ್ಲಿ ಪ್ರತ್ಯರ್ಜಿದಾರರು ಮಂಡಿಸಿದ ವಾದಾಂಶವನ್ನು ನ್ಯಾಯಾಧಿಕರಣವು ಸ್ವೀಕರಿಸಿರುವುದಿಲ್ಲ ಮತ್ತು ಖಾಯಂಗೊಳಿಸುವುದಕ್ಕಾಗಿ ಮಾಡಿದ ಕ್ಲೇಮು ಪುರಸ್ಕರಿಸದ ಕಾರಣವು ಸೂಕ್ತವಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ.

*ರಿಟ್ ಅರ್ಜಿ ಸಂಖ್ಯೆ: 34340/2016 (ಎಸ್–ಕೆ.ಎ.ಟಿ), ದಿನಾಂಕ: 20ನೇ ಜುಲೈ, 2016.

**ಈ ನ್ಯಾಯಾಲಯ ಹೊರಡಿಸಿದ ಪ್ರಶ್ನಿತ ಆದೇಶದ ಅನುಸಾರವಾಗಿ ಅರ್ಜಿದಾರರು ಸೇವೆಯಲ್ಲಿ ಮುಂದುವರೆಯುತ್ತಿರುವುದು ಕಂಡುಬಂದಿರುವುದರಿಂದ ನ್ಯಾಯಾಧಿಕರಣವು ಪ್ರತಿಕೂಲ ಆದೇಶವನ್ನು ಹೊರಡಿಸುವುದರ ಮೂಲಕ ಮತ್ತೆ ಅಧಿಕಾರ ಚಲಾಯಿಸಲು, ವಿಭಿನ್ನ ರೀತಿಯ ಅಭಿಪ್ರಾಯವನ್ನು ತೆಗೆದುಕೊಳ್ಳಲು ಅದು ಮುಕ್ತವಾಗಿರುವುದಿಲ್ಲ. ಹಾಗಾಗಿ, ನ್ಯಾಯಾಧಿಕರಣದ ಪ್ರಶ್ನಿತ ಆದೇಶವನ್ನು ವಜಾಗೊಳಿಸಲಾಗಿದೆ ಮತ್ತು ನ್ಯಾಯಾಧಿಕರಣದ ಮುಂದೆ ಪ್ರಶ್ನಿತ ವಿಷಯಗಳಗೊಳಪಟ್ಟು ದಿನಾಂಕ 02.06.2014ರ ಹಿಂಬರಹವನ್ನು ಸಹಾ ವಜಾಗೊಳಿಸಲಾಗಿದೆ.**

**ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. 2006 (4) ಎಸ್‌ಸಿಸಿ, ಪುಟ 1*
*ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಮತ್ತು ಇತರರು*
*–ವಿರುದ್ಧ– ಉಮಾದೇವಿ ಮತ್ತು ಇತರರು (ಉಲ್ಲೇ) 2*

ಅರ್ಜಿದಾರರ ಪರವಾಗಿ: ಶ್ರೀ ರಂಗನಾಥ ಎಸ್. ಜೋಯಿಸ್, ವಕೀಲರು.
ಪ್ರತ್ಯಾರ್ಜಿದಾರರ ಪರವಾಗಿ: ಶ್ರೀ ಡಿ. ನಾಗರಾಜ್, ಹೆಚ್ಚುವರಿ ಸರ್ಕಾರಿ ವಕೀಲರು.

## ಆದೇಶ

**ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್:**

ನಿಯಮ

ಶ್ರೀ ಡಿ. ನಾಗರಾಜ್, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, 1 ಮತ್ತು 2ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾಗಿರುವರು. ಎರಡು ಕಡೆಯ

ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ ಅರ್ಜಿಯನ್ನು ಅಂತಿಮವಾಗಿ ಸುನಾವಣೆ ಮಾಡಲಾಗಿದೆ.

2. ಅರ್ಜಿದಾರಳು ಪ್ರತ್ಯರ್ಜಿದಾರರಲ್ಲಿ ಬೆರಳಚ್ಚುಗಾರರಾಗಿ ಕೆಲಸ ಮಾಡುತ್ತಿರುವುದು ಮೊಕದ್ದಮೆಯ ಸಂಕ್ಷಿಪ್ತ ಸಂಗತಿಯಾಗಿದೆ. ಅರ್ಜಿದಾರಳ ಅನುಸಾರವಾಗಿ ವರದಿಯಾಗಿರುವ ***ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಮತ್ತು ಇತರರು –ವಿರುದ್ಧ– ಉಮಾದೇವಿ ಮತ್ತು ಇತರರು*** [1] ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಅರ್ಜಿದಾರಳ ಹುದ್ದೆಯನ್ನು ಖಾಯಂಗೊಳಿಸಲು ಪರಿಗಣಿಸುವಂತೆ ಅಗತ್ಯಪಡಿಸಿದ್ದಾರೆ. ಆದಾಗ್ಯೂ, ಖಾಯಂಗೊಳಿಸಲು ಆಕೆಯ ಪ್ರಕರಣವನ್ನು ಪರಿಗಣಿಸಿರುವುದಿಲ್ಲ. ಅರ್ಜಿದಾರಳು, ನ್ಯಾಯಾಧಿಕರಣದ ಮುಂದೆ ಅರ್ಜಿ ಸಂಖ್ಯೆ 2651/2012 ನ್ನು ಖಾಯಂಗೊಳಿಸಲು ಕೋರಿ ಸಲ್ಲಿಸಿರುವಳು. ಸದರಿ ವ್ಯವಹರಣೆಗಳಲ್ಲಿ, ಪ್ರತ್ಯರ್ಜಿದಾರರು ತಮ್ಮ ವಾದದಲ್ಲಿ ಈ ಮೊಕದ್ದಮೆಯ ಅರ್ಜಿದಾರರ ಸನ್ನಿವೇಶ ವಿಭಿನ್ನವಾಗಿದೆ ಎಂದರೆ, ಅರ್ಜಿದಾರಳು ಈ ನ್ಯಾಯಾಲಯವು ಡಬ್ಲ್ಯೂಪಿ. ಸಂಖ್ಯೆ.12610/1993 ಮತ್ತು 8192/1990ರಲ್ಲಿ ಹೊರಡಿಸಿದ ಮಧ್ಯಂತರ ಆದೇಶದ ಅನುಸಾರವಾಗಿ ತಮ್ಮ ಸೇವೆಯಲ್ಲಿ ಮುಂದುವರೆದಿರುತ್ತಾರೆ. ಆದುದರಿಂದ ಮೇಲೆ ತಿಳಿಸಿದ ***ಉಮಾದೇವಿ*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಮೂಲಕ ಹೊರತುಪಡಿಸಲು ಉಪಬಂಧಿಸಿರುವುದರ ಅನುಸಾರ ಅರ್ಜಿದಾರಳು ಖಾಯಂಗೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲವೆಂದು ನಿವೇದಿಸಿದ್ದಾರೆ. ಆದಾಗ್ಯೂ, ನ್ಯಾಯಾಧಿಕರಣ ಅಭಿಲೇಖಿಸಿದ ಸಂಗತಿಯನ್ನು ಪ್ರತ್ಯರ್ಜಿದಾರರು ಈ ಬಗ್ಗೆ ನ್ಯಾಯಾಧಿಕರಣದ ಮುಂದೆ ಮೇಲೆ ಉಲ್ಲೇಖಿಸಿದ ಅರ್ಜಿದಾರಳನ್ನು ದಿನಗೂಲಿ ನೌಕರಳಾಗಿ ಮುಂದುವರೆಸುವುದಕ್ಕೆ ಈ ನ್ಯಾಯಾಲಯವು ಹೊರಡಿಸಿದ ಮಧ್ಯಂತರ ಆದೇಶಕ್ಕೆ ಅನುಗುಣವಾಗಿ ಅರ್ಜಿದಾರಳನ್ನು ಮುಂದುವರೆಸಿರುವ ಬಗೆಗಿನ ದಸ್ತಾವೇಜನ್ನು ಪ್ರತ್ಯರ್ಜಿದಾರರು ಹಾಜರುಪಡಿಸಿರುವುದಿಲ್ಲ. ತದನಂತರದಲ್ಲಿ ನ್ಯಾಯಾಧಿಕರಣ, ದಿನಾಂಕ 6ನೇ ನವೆಂಬರ್, 2012ರ ಆದೇಶದ ಮೂಲಕ ಮೇಲೆ ಉಲ್ಲೇಖಿಸಿದ ***ಉಮಾದೇವಿ*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ತೀರ್ಮಾನಿಸಿದ ಖಾಯಂಗೊಳ್ಳುವ ನಿಬಂಧನೆಯನ್ನು

1. 2006 (4) ಎಸ್‌ಸಿಸಿ, ಪುಟ 1

ಪರಿಗಣಿಸುವ ಸಂಬಂಧದಲ್ಲಿ ಅರ್ಜಿದಾರಳು ಸಲ್ಲಿಸಿದ ಕ್ಲೇಮನ್ನು ಪುರಸ್ಕರಿಸದಿರಲು ಯಾವುದೇ ಕಾರಣವು ಇಲ್ಲಿ ಕಂಡುಬರುವುದಿಲ್ಲ ಮತ್ತು ನ್ಯಾಯಾಧಿಕರಣ ಖಾಯಂಗೊಳಿಸುವ ಸಂಬಂಧದಲ್ಲಿ ಅರ್ಜಿದಾರಳ ಮೊಕದ್ದಮೆಯನ್ನು ಪರಿಗಣಿಸುವುದಕ್ಕೆ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಿದೆ.

3. ಈ ನ್ಯಾಯಾಲಯದ ಮುಂದೆ ಪ್ರತ್ಯರ್ಜಿದಾರರು ಡಬ್ಲ್ಯೂ.ಪಿ.ಸಂ. 37338/ 2013ರ ಮೂಲಕ ಮತ್ತಷ್ಟು ವಿಷಯಗಳ ದಸ್ತಾವೇಜನ್ನು ತೆಗೆದುಕೊಂಡು ಹಾಜರಾಗಿರುವರು ಮತ್ತು ಈ ನ್ಯಾಯಾಲಯ ಯಾವುದೇ ಸಂದರ್ಭದಲ್ಲಿ ಹಸ್ತಕ್ಷೇಪ ಮಾಡುವ ಅವಶ್ಯಕತೆ ಇರುವುದಿಲ್ಲ. ಆದರೆ ಈ ನ್ಯಾಯಾಲಯಕ್ಕೆ, ಕಾನೂನಿಗೆ ಅನುಸಾರವಾಗಿ ಗುಣಾರ್ಹತೆಯ ಮೇಲೆ ಅರ್ಜಿದಾರಳ ಮೊಕದ್ದಮೆಯನ್ನು ಪರಿಗಣಿಸುವುದಕ್ಕೆ ಪ್ರತ್ಯರ್ಜಿದಾರರು ಮುಕ್ತವಾಗಿರುವುದು ಕಂಡುಬಂದಿರುತ್ತದೆ. ಆದರೆ, ಅರ್ಜಿಯ ಸಂಗತಿಗಳು ಹಾಗೆ ಉಳಿದಿರುವಾಗ, ದಿನಾಂಕ 22.11.2013 ಆದೇಶದಲ್ಲಿ ಅರ್ಜಿಯನ್ನು ವಜಾಗೊಂಡಿರುವುದನ್ನು ನೋಡಬಹುದು. ಪ್ರತ್ಯರ್ಜಿದಾರರು ವಸ್ತುವಿಷಯವನ್ನು ಮತ್ತೆ ಪರಿಗಣಿಸಿ ಅರ್ಜಿದಾರಳ ಸೇವೆಯನ್ನು ಖಾಯಂ ಮಾಡಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಅರ್ಜಿದಾರಳ ಪ್ರಕಾರ, ದಿನಗೂಲಿಗಳಂತೆ ಕೆಲಸ ಮಾಡುತ್ತಿರುವ ನೌಕರರ ಸೇವೆಗಳನ್ನು ಖಾಯಂಮಾಡಿರುವ ದಿನಾಂಕ 16.09.2014ರ ಆದೇಶವನ್ನು ನೋಡಿ. ಅದೇ ರೀತಿಯಲ್ಲಿ ನನ್ನ ಉದ್ಯೋಗವನ್ನು ಖಾಯಂಗೊಳಿಸಬೇಕೆಂದು ಅರ್ಜಿದಾರಳು ನಿವೇದಿಸಿರುತ್ತಾಳೆ.

4. ಈ ಸನ್ನಿವೇಶಗಳಲ್ಲಿ, ನ್ಯಾಯಾಧಿಕರಣದ ಮುಂದೆ ಅರ್ಜಿದಾರಳು ಸಂ. 9420/2014 ರ ಅರ್ಜಿಯನ್ನು ದಾಖಲಿಸಿದ್ದಾಳೆ. ನ್ಯಾಯಾಧಿಕರಣ, ದಿನಾಂಕ 28.04.2016 ರಂದು ಪ್ರತ್ಯರ್ಜಿದಾರರು ಖಾಯಂಗೊಳಿಸಲು ನಿರಾಕರಿಸಿದ ನಿರ್ಣಯದಲ್ಲಿ ನ್ಯಾಯಾಧಿಕರಣವು ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೊರಡಿಸಿದ ಆದೇಶವನ್ನು ಮತ್ತು ಅಂತಿಮವಾಗಿ ಅರ್ಜಿಯನ್ನು ವಜಾಗೊಳಿಸಿರುವುದನ್ನು ಈ ನ್ಯಾಯಾಲಯದಲ್ಲಿ ಅರ್ಜಿದಾರಳು ಪ್ರಶ್ನಿಸಿದ್ದಾಳೆ.

5. ನಾವು ಅರ್ಜಿದಾರಳ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಶ್ರೀ ರಂಗನಾಥ ಎಸ್ ಜೋಯಿಸ್ ಅವರು ಮತ್ತು ಪ್ರತ್ಯರ್ಜಿದಾರರ ಪರವಾಗಿ ಮಾನ್ಯ

ನ್ಯಾಯವಾದಿಗಳಾದ ಡಿ. ನಾಗರಾಜ್, ಹೆಚ್ಚುವರಿ ಸರ್ಕಾರಿ ವಕೀಲರು ಹಾಜರಾಗಿ ಮಂಡಿಸಿದ ವಾದಗಳನ್ನು ಆಲಿಸಿದ್ದೇವೆ.

6. ನಮ್ಮ ಅಭಿಪ್ರಾಯದಲ್ಲಿ, ಅರ್ಜಿ ಸಂ. 2651/2012 ರಲ್ಲಿ ದಿನಾಂಕ 6ನೇ ನವೆಂಬರ್, 2012 ಆದೇಶದ ಮೂಲಕ ಈಗಾಗಲೇ ಹಿಂದಿನ ಸುತ್ತಿನ ದಾವೆಯಲ್ಲಿ, ರಿಟ್ ಅರ್ಜಿಯಲ್ಲಿ ಈ ನ್ಯಾಯಾಲಯವು ಹೊರಡಿಸಿದ ಮಧ್ಯಂತರ ಆದೇಶಕ್ಕೆ ಅನುಸಾರವಾಗಿ ಅರ್ಜಿದಾರಳು ಸೇವೆಯಲ್ಲಿ ಮುಂದುವರೆಸುವ ಸಂಬಂಧದಲ್ಲಿ ಪ್ರತ್ಯರ್ಜಿದಾರರು ಮಂಡಿಸಿದ ವಾದಾಂಶವನ್ನು ನ್ಯಾಯಾಧಿಕರಣವು ಸ್ವೀಕರಿಸಿರುವುದಿಲ್ಲ ಮತ್ತು ಖಾಯಂಗೊಳಿಸುವುದಕ್ಕಾಗಿ ಮಾಡಿದ ಕ್ಲೇಮು ಪುರಸ್ಕರಿಸದ ಕಾರಣವು ಸೂಕ್ತವಾಗಿರುವುದಿಲ್ಲವೆಂದು ಹೇಳಿದೆ, ಈ ನ್ಯಾಯಾಲಯ ಹೊರಡಿಸಿದ ಪ್ರಶ್ನಿತ ಆದೇಶದ ಅನುಸಾರವಾಗಿ ಅರ್ಜಿದಾರಳು ಸೇವೆಯಲ್ಲಿ ಮುಂದುವರೆಯುತ್ತಿರುವುದು ಕಂಡುಬಂದಿರುವುದರಿಂದ ನ್ಯಾಯಾಧಿಕರಣ ಮತ್ತೆ ಅಧಿಕಾರ ಚಲಾಯಿಸಲು ವಿಭಿನ್ನ ರೀತಿಯ ಅಭಿಪ್ರಾಯವನ್ನು ತೆಗೆದುಕೊಳ್ಳಲು ಅದು ಮುಕ್ತವಾಗಿರುವುದಿಲ್ಲ ಅಥವಾ ಅರ್ಜಿ ಸಂ. 2651/2012 ರಲ್ಲಿ ಈಗಾಗಲೇ ನಿರ್ಣಯವನ್ನು ಮುಕ್ತಾಯಗೊಳಿಸಲಾಗಿದ್ದು, ಪ್ರಶ್ನಿತ ಆದೇಶದಲ್ಲಿ ಯಾವುದೇ ವಿಭಿನ್ನ ನಿರ್ಣಯವನ್ನು ದಾಖಲಿಸುವಂತಿಲ್ಲ.

7. ಆದಾಗ್ಯೂ, ಮಾನ್ಯ ಸರ್ಕಾರಿ ವಕೀಲರು, ಈ ನ್ಯಾಯಾಲಯದ ಮುಂದೆ, ನ್ಯಾಯಾಧಿಕರಣದ ಈ ಮುಂಚಿನ ಆದೇಶ ದಿನಾಂಕ 22ನೇ ನವೆಂಬರ್, 2013ನ್ನು ರಿಟ್ ಅರ್ಜಿಯಲ್ಲಿ ಪ್ರಶ್ನಿಸಿರುವಾಗ, ಈ ನ್ಯಾಯಾಲಯವು, ಕಾನೂನಿಗೆ ಅನುಸಾರವಾಗಿ ಇಲ್ಲಿನ ಅರ್ಜಿದಾರಳ ಮೊಕದ್ದಮೆಯ ಗುಣಾರ್ಹತೆಯನ್ನು ಪರಿಗಣಿಸುವುದಕ್ಕೆ ಪ್ರತ್ಯರ್ಜಿದಾರರು ಮುಕ್ತವಾಗಿರುತ್ತಾರೆ ಎಂದು ಅಭಿಪ್ರಾಯಪಟ್ಟಿದೆ ಮತ್ತು ಆದುದರಿಂದಲೇ ನ್ಯಾಯಾಧಿಕರಣ ಈಗಾಗಲೇ ಪರಿಗಣಿಸಿದ ಆ ಯಾವುದೇ ಇತರ ಕಾರಣಗಳನ್ನು ಪುನರ್ ಪರಿಶೀಲಿಸಬೇಕಾಗುತ್ತದೆ ಮತ್ತು ರಿಟ್ ಅರ್ಜಿಯಲ್ಲಿ ಈ ನ್ಯಾಯಾಲಯದ ಪ್ರಶ್ನಿತ ಆದೇಶಕ್ಕೆ ಅನುಸಾರವಾಗಿ ಅರ್ಜಿದಾರಳು ಸೇವೆಯಲ್ಲಿ ಮುಂದುವರೆಯುತ್ತಿರುವುದು ಮತ್ತೆ ಕಂಡುಬಂದಿರುತ್ತದೆ. ಮೇಲೆ ಹೇಳಿದ ಸರ್ವೋಚ್ಚ ನ್ಯಾಯಾಲಯದ ***ಉಮಾದೇವಿ*** ಮೊಕದ್ದಮೆಯಲ್ಲಿ ವ್ಯಕ್ತಪಡಿಸಿದ ಅಸಾಧಾರಣ ಪ್ರವರ್ಗಕ್ಕೆ ಅರ್ಜಿದಾರಳ ಮೊಕದ್ದಮೆ ಸೇರುವುದರಿಂದ ಮತ್ತು ಆದುದರಿಂದ,

ಅರ್ಜಿ ಸಂಖ್ಯೆ 2651/2012 ರಲ್ಲಿನ ತನ್ನ ನಿರ್ಣಯದಲ್ಲಿ ತೆಗೆದುಕೊಂಡ ಹಿಂದಿನ ದೃಷ್ಟಿಕೋನವು ಸರಿಯಾದುದಲ್ಲ ಅಥವಾ ಉಲ್ಲಂಘನೆಯಾಗಿದೆಯೆಂದು ಹೇಳುವಂತಿಲ್ಲವೆಂದು ನಿವೇದಿಸಿದ್ದಾರೆ.

8. ನಮ್ಮ ಅಭಿಪ್ರಾಯದಲ್ಲಿ, ಎರಡು ಕಾರಣಗಳಿಗಾಗಿ ಈ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಒಂದನೇ ಕಾರಣ, ನ್ಯಾಯಾಧಿಕರಣ ತನ್ನದೇ ಆದೇಶಕ್ಕೆ ಬದ್ಧವಾಗಿದೆ ಮತ್ತು ಎರಡನೇ ಕಾರಣ ಖಾಯಂಗೊಳಿಸುವ ಪ್ರಯೋಜನವನ್ನು ನಿರಾಕರಿಸುವುದಕ್ಕಾಗಿ ಲಭ್ಯವಿರುವ ಯಾವುದೇ ಇತರ ಕಾರಣಗಳ ಹೊರತು ಈ ನ್ಯಾಯಾಲಯ ಗುಣಾರ್ಹತೆಯ ಮೇಲೆ ಅರ್ಜಿದಾರಳ ಮೊಕದ್ದಮೆಯನ್ನು ಪರಿಗಣಿಸಲು ಅಭಿವ್ಯಕ್ತಿಸಿರುವುದನ್ನು ನ್ಯಾಯಾಧಿಕರಣವು, ಆ ಯಾವುದೇ ಇತರ ಕಾರಣಗಳಿಂದ ಈಗಾಗಲೇ ಮುಕ್ತಾಯಗೊಳಿಸಿದೆ. ಯಾವುದೇ ಮೊಕದ್ದಮೆಯಲ್ಲಿ, ಭಾವಿತ ಪೂರ್ವನ್ಯಾಯದ ತತ್ವವನ್ನು ಪರಿಗಣಿಸುವುದಾದರೆ ಆ ಯಾವುದೇ ವಾದಾಂಶವನ್ನು ಮುಕ್ತಾಯವಾಗಿದೆ ಎಂದು ಭಾವಿಸುವುದನ್ನು ಸಹ ಈ ವಾದಾಂಶದಲ್ಲಿ ಪ್ರಶ್ನಿಸಲಾಗಿದೆ. ಯಾವುದೇ ಸಂದರ್ಭದಲ್ಲಿ, ಈ ನ್ಯಾಯಾಲಯ ಅರ್ಜಿಯನ್ನು ಮತ್ತು ದಿನಾಂಕ 22ನೇ ನವೆಂಬರ್ 2013 ರಂದು ಹೊರಡಿಸಿದ ಆದೇಶವನ್ನು ವಜಾ ಮಾಡಿದೆ. ಈ ಎಲ್ಲಾ ಸನ್ನಿವೇಶಗಳ ಮೇರೆಗೆ, ನಮಗೆ ಮಾನ್ಯ ಸರ್ಕಾರಿ ವಕೀಲರು ಎತ್ತಿದ ವಾದಾಂಶವನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ಕಂಡುಬಂದಿದೆ.

9. ಮೇಲಿನ ಅಭಿಪ್ರಾಯದಲ್ಲಿ, ನ್ಯಾಯಾಧಿಕರಣ ತನ್ನದೇ ಈ ಮುಂಚಿನ ಆದೇಶದಲ್ಲಿ ಈಗಾಗಲೇ ತೆಗೆದುಕೊಂಡ ನಿರ್ಣಯಕ್ಕೆ ಪ್ರತಿಕೂಲವಾಗಿ ಮಾಡಿದ ಆದೇಶದಲ್ಲಿ ಈ ನ್ಯಾಯಾಲಯವು ಹಸ್ತಕ್ಷೇಪ ಮಾಡಿರುವುದಿಲ್ಲ ಎಂಬುದು ಏಕಮಾತ್ರ ಉತ್ತರವಾಗಿರುತ್ತದೆ. ಅರೆ ನ್ಯಾಯಿಕ ಪ್ರಾಧಿಕಾರವು ತನ್ನ ಹಿಂದಿನ ನಿರ್ಣಯದಲ್ಲಿ ಅದೇ ಪಕ್ಷಕಾರರ ನಡುವೆ ತೆಗೆದುಕೊಂಡ ಉದ್ದೇಶಪೂರ್ವಕ ವಿಭಿನ್ನ ನಿಲುವನ್ನು ಅನುಮತಿಸಿದರೆ, ನ್ಯಾಯಿಕ ಮತ್ತು ಅರೆನ್ಯಾಯಿಕದ ಆದೇಶವು ಪಾವಿತ್ರ್ಯತೆಯನ್ನು ಕಳೆದುಕೊಂಡಂತೆ, ಈ ದೃಷ್ಟಿಯಿಂದ ಅಂಥ ನಿಲುವುಗಳನ್ನು ಅನ್ಯಥಾ ಕಾನೂನಿನಲ್ಲಿ ಸಹ ಅನುಮತಿಸುವುದಿಲ್ಲ ಎಂಬುದನ್ನು ನಿರೂಪಿಸ ಬೇಕಾದುದನ್ನು ಅಗತ್ಯಪಡಿಸುತ್ತದೆ.

10. ಮೇಲಿನ ಪರಿಶೀಲನೆ ಮತ್ತು ಚರ್ಚೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಈ ನ್ಯಾಯಾಲಯವು, ನ್ಯಾಯಾಧಿಕರಣ ಹೊರಡಿಸಿದ ಪ್ರಶ್ನಿತ ಆದೇಶವನ್ನು ವಜಾಗೊಳಿಸುತ್ತದೆ ಹಾಗೂ ಕಾನೂನಿಗೆ ಅನುಸಾರವಾಗಿ ಮೇಲೆ ಹೇಳಿದ ಸರ್ವೋಚ್ಚ ನ್ಯಾಯಾಲಯದಲ್ಲಿನ ***ಉಮಾದೇವಿ*** ಮೊಕದ್ದಮೆಯ ನಿರ್ಣಯದ ಬೆಳಕಿನಲ್ಲಿ ಅರ್ಜಿದಾರರನ್ನು ಖಾಯಂಗೊಳಿಸಲು ಪರಿಗಣಿಸತಕ್ಕದ್ದೆಂದು ಪ್ರತ್ಯರ್ಜಿದಾರರಿಗೆ ನಿರ್ದೇಶಿಸುತ್ತದೆ. ಇದರೊಂದಿಗೆ, ಈ ನ್ಯಾಯಾಲಯವು ಈಗಾಗಲೇ ಹೊರಡಿಸಿರುವ ಮಧ್ಯಂತರ ಆದೇಶದಲ್ಲಿ ಹೇಳಿರುವಂತೆ ಅರ್ಜಿದಾರಳನ್ನು ಅವರ ಸೇವೆಯಲ್ಲಿ ಮುಂದುವರೆಸುವುದು, ಪ್ರತ್ಯರ್ಜಿದಾರರು ಅರ್ಜಿದಾರಳು ಖಾಯಂಗೊಳ್ಳುವ ಪ್ರಯೋಜನವನ್ನು ನಿರಾಕರಿಸುವುದಕ್ಕೆ ಯಾವುದೇ ಸಕಾರಣವು ಲಭ್ಯವಿರುವುದಿಲ್ಲ. ಖಾಯಂಗೊಳಿಸುವ ಸಂಬಂಧದ ಇತರ ಅಂಶಗಳನ್ನು ಪರಿಶೀಲಿಸತಕ್ಕದ್ದು ಹಾಗೂ ಈ ಆದೇಶದ ದಿನಾಂಕದಿಂದ ನಾಲ್ಕು ತಿಂಗಳ ಕಾಲಾವಧಿಯೊಳಗಾಗಿ ಕಾನೂನಿಗೆ ಅನುಸಾರವಾಗಿ ನಿರ್ಣಯವನ್ನು ಜಾರಿಗೊಳಿಸತಕ್ಕದ್ದು. ನ್ಯಾಯಾಧಿಕರಣದ ಪ್ರಶ್ನಿತ ಆದೇಶವನ್ನು ವಜಾಗೊಳಿಸಲಾಗಿದೆ ಮತ್ತು ನ್ಯಾಯಾಧಿಕರಣದ ಮುಂದೆ ಆಕ್ಷೇಪಿಸಿದ ವಿಷಯಗಳಿಗೊಳಪಟ್ಟು ದಿನಾಂಕ 02.06.2014 ರಂದು ನೀಡಿದ್ದ ಹಿಂಬರಹವನ್ನು ವಜಾಗೊಳಿಸಲಾಗಿದೆ.

ಮೇಲೆ ಹೇಳಿರುವಷ್ಟರ ಮಟ್ಟಿಗೆ ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ನಿರುಪಾಧಿಕ ಆದೇಶವಾಗಿದೆ.